ಸೇರಿದ ಮಗುವನ್ನು ನೋಡುವಂತೆ ಸಣ್ಣತಿಮ್ಮಯ್ಯ ಬಿಳಿಕುರಿಯ ಬಂಡನ್ನು ನೋಡುತ್ತಾ ನಿಂತ.

ಮುಂದಿನದನ್ನು ಅವನಿಗೆ ಯಾರೂ ವಿವರಿಸಿ ಹೇಳಬೇಕಾಗಿರಲಿಲ್ಲ! ಅಲ್ಲಿ ಮೂಡಿದ್ದ ಹೆಜ್ಜೆ ಗುರುತುಗಳು ಈರಪ್ಪನ ಹಟ್ಟಿಕಡೆಗೆ ಹೋಗಿದ್ದವು! ತನಗರಿವಿಲ್ಲದೆ ಈರಪ್ಪನ ಹಟ್ಟಿಕಡೆಗೆ ಅವನ ಕಾಲುಗಳು ತಿರುಗಿದವು. ನಡೆಯಲು ಎರಡು ಹೆಜ್ಜೆ ಇಟ್ಟ. ಮತ್ತೆ ಕಾಲ ಕೆಳಗಿನಿಂದ ಮಣ್ಣು ಅದುರುವಂತೆ ಗೆಜ್ಜೆ ಗಲಗುಡುವ ಶಬ್ದ ಕೇಳಿಸಿತು. ಮತ್ತೊಂದು ಹೆಜ್ಜೆ ಇಟ್ಟ. ಆಗಲೂ ಮಣ್ಣಿನೊಳಗಿಂದ ಗೆಜ್ಜೆ ಗಲಗುಡುವ ಶಬ್ದ ಅವನ ಕಾಲುಗಳ ಮೂಲಕ ಕಿವಿಗೆ ತಾಕಿತು. ಮತ್ತೆ ಮತ್ತೆ ಹಾಗೆಯೇ ಪರೀಕ್ಷಿಸಿದ. ಕಂಪಿಸಿದ ಮಣ್ಣಿನೊಂದಿಗೆ ಗೆಜ್ಜೆಯ ಶಬ್ದ ಪುನರಾವರ್ತಿತವಾಗುತ್ತಿತ್ತು! ಸಣ್ಣತಿಮ್ಮಯ್ಯ ಹಾಗೆಯೇ ಬಗ್ಗಿ ತಾನು ಊರಿದ್ದ ಕಾಲ ಕೆಳಗಿನ ನೆಲವನ್ನು ಬಗೆದ. ಅಲ್ಲಿ ಕುರಿಯ ಕೊರಳಿಗೆ ಕಟ್ಟಿದ್ದ, ಗೆಜ್ಜೆಸರದ ಗೋಮಾಳೆಯಿಂದ ರಕ್ತ ತೊಟ್ಟಿಕ್ಕುತ್ತಿತ್ತು. ಅದು ರಕ್ತ ಸುರಿಯುತ್ತಿದ್ದ ಕಣ್ಣುಗಳಿಂದ ಸಣ್ಣ ತಿಮ್ಮಯ್ಯನನ್ನು ನೋಡಿತು. ಗೆಜ್ಜೆಸರವನ್ನು ಕೈಗೆತ್ತಿಕೊಂಡು ಕಣ್ಣಿಗೆ ಹತ್ತಿರದಲ್ಲಿಟ್ಟುಕೊಂಡು ನೋಡಿದ. ಅದು ಹುಳಿಯಾರು ಸಂತೆಯಿಂದ ತಾನೇ ತಂದು ಕಟ್ಟಿದ್ದ ಗೆಜ್ಜೆಸರ. ಸಣ್ಣತಿಮ್ಮಯ್ಯ ಹಾಗೆಯೇ ಕಣ್ಣುಮುಚ್ಚಿಕೊಂಡ. ಅವನ ಕಣ್ಣುಗಳಲ್ಲಿ ಕೆಂಡದಂಥ ಬಿಸಿಯಾಗಿದ್ದ ಕಣ್ಣೀರು ಹರಿಯತೊಡಗಿತು.

ಸಣ್ಣತಿಮ್ಮಯ್ಯ ಈರಪ್ಪನ ಹಟ್ಟಿ ಮುಂದೆ ಬಂದು ನಿಂತ. ಸಣ್ಣತಿಮ್ಮಯ್ಯನನ್ನು ನೋಡಿ ಈರಪ್ಪ ತುಸು ಬೆವರಿದ. ಯಾವ ಮಾತೂ ಅವನಿಂದ ಹೊರಡಲಿಲ್ಲ! ಸಣ್ಣತಿಮ್ಮಯ್ಯ ಈರಪ್ಪನನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ ಅವನ ಮುಂದೆ ತನ್ನ ಕೈಯೊಳಗಿದ್ದ ಕುರಿಬಂಡು ಹಿಡಿದ. ಅದನ್ನು ನೋಡಿದ ಕೂಡಲೆ ಈರಪ್ಪನ ಕಪ್ಪುಹಣೆಯ ಮೇಲೆ ಬೆವರಿನ ಹನಿಗಳು ಕಾಣಿಸಿಕೊಂಡವು. ಕತ್ತಿನಿಂದ ಬೆವರು ಸುರಿಯತೊಡಗಿತು. ಸಣ್ಣತಿಮ್ಮಯ್ಯನ ಅನಿರೀಕ್ಷಿತ ನಡವಳಿಕೆಯಿಂದ ಈರಪ್ಪ ಸಂಪೂರ್ಣವಾಗಿ ಗಲಿಬಿಲಿಗೊಂಡು ಮೌನವಾದ. ಸಣ್ಣತಿಮ್ಮಯ್ಯನ ಕಣ್ಣುಗಳ ತೀಕ್ಷ್ಣತೆಯನ್ನು ಎದುರಿಸಲಾರದೆ ಈರಪ್ಪನ ಕಣ್ಣುಗಳು ನೆಲ ನೋಡತೊಡಗಿದವು. ಅಲ್ಲಿ ಸುಳಿದಾಡುತ್ತಿದ್ದ ಗಾಳಿ ಈರಪ್ಪನ ಉಸಿರುಕಟ್ಟಿಸುತ್ತಿತ್ತು.

* * *

ಕಾಲ ಕಳೆದುಹೋಗುವುದೆಂದರೆ ಹೀಗೆಯೇ. ಐದಾರು ವಾರಗಳು ಕಳೆದುಹೋದವು. ಅದರ ಜೊತೆಯಲ್ಲಿ ಕೆಲವು ನೆನಪುಗಳೂ ಕೂಡ. ನಿಜವಾದ ಬೇಸಗೆ ಈಗ ಆರಂಭವಾಗಿತ್ತು. ಅಂದಿನ ಸಂಜೆಯ ಸೂರ್ಯ ಬುಡ್ಡನಕಟ್ಟೆಯ ನೀರಿನ ಮೇಲೆ ತನ್ನ ಬಂಗಾರಬಣ್ಣದ ಕಿರಣಗಳನ್ನು ತೇಲಿಬಿಟ್ಟಿದ್ದ. ಅದೇ ಬಡ್ಡನಕಟ್ಟೆಯಲ್ಲಿ ಸಣ್ಣತಿಮ್ಮಯ್ಯ ಕುರಿ ಮೇಯಿಸಿಕೊಂಡು ಹಟ್ಟಿಗೆ ಮರಳುವ ಮುಂಚೆ ಕುರಿಗಳಿಗೆ ಹೊಂಬಣ್ಣದ ನೀರು ಕುಡಿಸುತ್ತಿದ್ದ. ಬಿಳಿಕುರಿಯ ಬಗ್ಗೆ ತನಗಿದ್ದ ನೆನಪುಗಳನ್ನು ತೊರೆದು ಹುಲ್ಲುಗಾವಲು, ಬಂಗಾರ ಬಣ್ಣದ ನೀರು ಮತ್ತು ನಕ್ಷತ್ರಗಳೊಡನೆ ವಿಹರಿಸಲು ಸಣ್ಣತಿಮ್ಮಯ್ಯನ ಮನಸ್ಸು ನಿರಾಕರಿಸುತ್ತಿತ್ತು. ಆಕಸ್ಮಿಕವೋ ಎಂಬಂತೆ ಅಜ್ಜಪ್ಪನಹಟ್ಟಿ ಈರಪ್ಪನೂ ತನ್ನ ಮರಿಗಳಿಗೆ ನೀರು ಕುಡಿಸಲು ಅದೇ ಜಾಗಕ್ಕೆ ಬಂದ. ಅಷ್ಟರಲ್ಲಾಗಲೇ ಮಸಿಗತ್ತಲು ಹಿಡಿಯುತ್ತಿತ್ತು. ಇಬ್ಬರ ಕುರಿಗಳೂ ಅಲ್ಲಿ ಕಲೆತವು. ಇಬ್ಬರೂ ಪರಸ್ಪರ ಮುಖ ನೋಡಿದರೂ ಮಾತನಾಡಲಿಲ್ಲ. ಸಣ್ಣತಿಮ್ಮಯ್ಯನ ಮುಖ ನಿರ್ಭಾವುಕವಾಗಿತ್ತು. ಇನ್ನು ಹೆಚ್ಚು ಹೊತ್ತು ಇಲ್ಲೇ ನಿಲ್ಲುವುದು ಅಷ್ಟು ಸರಿಯಲ್ಲ ಎಂದುಕೊಂಡ ಸಣ್ಣತಿಮ್ಮಯ್ಯ ತನ್ನ ಮೂಲ ಸ್ವಭಾವದಂತೆ ಮೌನವಾಗಿ ಹಿಂಡಿನೊಂದಿಗೆ ಹಟ್ಟಿಗೆ ಹಿಂದಿರುಗಿದ. ಹಳೆಯ ನೋವು, ಅವಮಾನಗಳು ಇನ್ನೂ ಈರಪ್ಪನ ಮನಸ್ಸಿನ ತಳದಲ್ಲಿ ಗಸಿಯಂತೆ ಉಳಿದುಕೊಂಡಿತ್ತು. ಮೊದಲೇ ಕಳೆಗುಂದಿದ್ದ ಈರಪ್ಪ ಇನ್ನಷ್ಟು ಪೆಚ್ಚಾಗಿ ತನ್ನ ಮರಿಗಳೊಂದಿಗೆ ಹಟ್ಟಿಗೆ ಹಿಂದಿರುಗಿದ. ಅವನ ನಡಿಗೆಯಲ್ಲಿ ಹತಾಶೆಯ ಗುರುತುಗಳು ಕಂಡು ಬರುತ್ತಿದ್ದವು.

ಹಟ್ಟಿಗೆ ಮರಳಿದ ಸಣ್ಣತಿಮ್ಮಯ್ಯ ಗೂಡಿಗೆ ಕುರಿಗಳನ್ನು ಕೂಡಿದ. ಕೊನೆಯದಾಗಿ ಎಲ್ಲ ಕುರಿಗಳು ಬಂದವೋ, ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಲು ಒಮ್ಮೆ ತಾಯಿಗುರಿಗಳ ಸುತ್ತ ನೋಡುತ್ತಾ ಬಂದ. ಎಲ್ಲವೂ ಸರಿಯಿದೆ ಎನ್ನುವಷ್ಟರಲ್ಲಿ ಒಂದು ಪರಮ ಅಲಾದಿಯಾಗಿ ಹಾಗೆ ಉಳಿಯಿತು. ಆದರೂ ಸಣ್ಣತಿಮ್ಮಯ್ಯ ಮತ್ತೊಮ್ಮೆ